# ದರ್ಪಣ DARPANA

ಮಂದಾರ ನ್ಯೂ ಇಂಗ್ಲೆಂಡ್ ಕನ್ನಡ ಕೂಟ ವಸಂತ ಸಂಚಿಕೆ ೨೦೦೬


**Report of Activities:**

The new team of office bearers (Executive Committee) of Mandaara, New England Kannada Koota was elected for a term of 2 years during the Ugadi celebration of 2005. Our dedicated committee takes pride in providing quality programs to Kannadigas of the New England area. Our events provide an excellent opportunity to meet and interact with fellow Kannadigas. Our programs also provide an appropriate forum and a great opportunity to our community members to showcase their talents and skills.

**Picnic - 2005:** NEKK annual picnic was held at Pomps Pond/Recreational Park in Andover on Saturday, 25th June 2005. More than 150 members, including 40 children attended the picnic. There were lots of fun-filled activities both for kids and adults. For sports enthusiasts we had arranged Tennis, Cricket, Volleyball and Croquet and for kids we had running race and 3-legged race. Our senior citizen also enjoyed participating in running race. For ladies we had arranged Lemon & Spoon race. For those interested in Kannada movies and songs we had Antakshari. To make the event more interesting and fun we also had Bingo. At the end of the day prizes were awarded to recognize the winners.

A Tennis clinic was conducted by Mr. Alagawadi Jagannath, our committee member and an avid tennis enthusiast, catering to both novice and experienced players. Al Jagannath is an accomplished tennis player and was ranked No.1 in New England during 2003 and was awarded membership to the Tennis Hall of Fame, New Port, R.I. He is a trained official USTA Coach. He has won many USTA tournaments. He has played in the Tennis NATIONALS held at Tuscon, Arizona in the year 2001. The Tennis Clinic covered Ball Sense through Forehand Drive, Backhand Drive and Serve. Other essential skills like basic grip, stance, stretching and general fitness were also discussed. More than 30 participants took advantage of the clinic and have overwhelmingly requested us to host the Tennis clinic again in 2006.

Our picnic is always well known for delicious and tasty potluck lunch. This year also our generous volunteers prepared diverse food that was very much appreciated by one and all. We also had majjige and panaka, in addition to soda, to quench the thirst of our members. Bhel-puri was also available on the occasion.

**Ganesha Festival - 2005:** Lord Ganesha Pooja was performed with religious fervor and deity on Saturday, 10th September 2005 at Walsh Middle School, Framingham, MA. We had a mix of traditional and light musical entertainment program arranged for the occasion. The program started with an invocation by Mamtha Kudlugi, followed by classical Veena recital by Smt. Lakshmi Narayan for one and half hours. After the dinner break, Lahari Group enthralled the audience with lively light music concert for over 90 minutes. Boston based Lahari Group have been performing in New England/New York area for over 5 years now.

**Kannada Manoranjini – 2005:** We had the privilege of hosting 'Kannada Manoranjani', a scintillating live performance on Sunday, October 16, 2005 at Keefe Technical School, Framingham, MA. It was an evening of enchanting music, skits, rip-roaring monologues, comedy and much more from famous cine stars and musicians from Karnataka. It was a fund raising program to help educate every child back in Karnataka under the auspices of Association of Kannada Kootas of America (AKKA).
The program started with a welcome speech by NEKK secretary Guru Samaga followed by an address by NEKK president Rajendra Rao. The vice president of AKKA, Dr. Sharanabasava Rajur also spoke on the occasion explaining the noble cause of educating every child.

Shylaja Santosh, a regular hostess on Udaya TV, was an efficient master of ceremony. Noted Kannada film actor Ramesh performed skits, comedy acts and monologues. The audience received him very well and was given standing ovation after each of his performance. He mingled with the audience and was the star attraction of the program. Noted Kannada singer, B.R.Chhaya, known as 'Nightingale of Karnataka', enthralled the audience with over 15 melodious songs and captured their attention taking them back to their homeland with nostalgic memories. She was accompanied by Ramprasad, who sang a few duets with her. Padmapani composed and anchored the program. Sudha Bargur was on stage on two occasions and made the audience laugh heartily with her jokes and rip-roaring monologues. She proved why she is the most successful women humorist today in Karnataka.

Through her humorous dialogues she succeeded in conveying the message for people to help educate deprived children. After 4 hours the program concluded with a vote of thanks by Guru Samaga. The program was attended by over 350 members and was a great success. We were able to raise and contribute $3,101 to the AKKA charitable foundation. After the program the artists and the donors had dinner at Dakshin Restaurant, Framingham. It was an enchanting evening and made all of us proud to be Kannadigas.

**Kannada Rajyotsava/Deepavali/Children's Day – 2005:** Our function was held on Saturday, 3rd December 2005 at Brophy School, Framingham, MA. We had lined up an exciting array of programs to entertain our members. This event showcased the talent and skills of our members and catered to entertain both children and adults. We had dramas, skits, monologues, folk dances, classical dances, ballets and songs from our members (both children and adults) in both individual and group settings. We also had Kolata, yoga presentation, fashion show, painting exhibition and 'aadarsha samsara' to enchant and mesmerize our members. Over 50 children showcased their talent on the occasion.

**Sri. Purandara Dasa Day – 2005**: Sri. Purandara Dasa day was celebrated on Sunday, March 26th, 2006 at Sri Lakshmi Temple, Ashland. The program was jointly hosted by the Mandaara, New England Kannada Koota (NEKK) and New England Hindu Temple Inc (NEHTI) committee on Youth, Cultural and Education program. About 100 people including children showed up and sang several keerthanas of Purandara Dasa. The program began with a group recitation of Sri. Purandara Dasa keerthanas followed by individual singing. NEKK president Rajendra Rao welcomed the audience. Smt. Durga Krishnan conducted the program. Mr. K.G. Narayan, President of the temple, helped us in conducting the program successful and we are grateful to him and the temple committee. After the program food was provided by enthusiastic volunteers.

- *Guruprasad Samaga*

**Mandaara, New England Kannada Koota – Executive Committee**

Rajendra Rao - President
Guruprasad Samaga – Secretary
Sanjay Kanchegowda - Treasurer
Shaila Sunder Rao
Manju Nathan
Roopa Thejaswi Bhat
Aparna Raja Rao
Arun Raja Rao
Raj Thejaswi Bhat
Mamata Kudlugi
Padma Jagannath
Algawadi Jagannath
Dayanand Ayrodi
Suneel Reddy



**ಮರೆಯಾದ ಕನ್ನಡದ ಕಣ್ಮಣಿ**
**ಪದ್ಮಭೂಷಣ ಡಾ॥ರಾಜ್‌ಕುಮಾರ್**
**೨೪/೪/೧೯೨೯ – ೧೨/೪/೨೦೦೬**

ಆಡಿಸಿ ನೋಡು ಬೀಳಿಸಿ ನೋಡು, ಉರುಳಿ ಹೋಗದು ....

ಇದು ಕನ್ನಡದ ಅತ್ಯಂತ ಸುಂದರ ಹಾಗು ಪ್ರಖ್ಯಾತ ಗೀತೆಗಳಲ್ಲಿ ಒಂದು. ಅಣ್ಣಾವರ ಚಿತ್ರಗಳು ಹಾಗು ಗೀತೆಗಳು ಮನರಂಜನೆ ಮಾತ್ರವಲ್ಲ, ಹಲವು ಬಾರಿ ಚಿಂತನೆ ಹಾಗು ಅರಿವಿಗೆ ದಾರಿ ಮಾಡಿಕೊಟ್ಟಿವೆ. ಪುಟ್ಟಣ್ಣ ಕಣಗಾಲರ ಚಿತ್ರಗಳಂತೆ, ಡಾ॥ರಾಜ್‌ಕುಮಾರ್ ಅವರ ಹಲವಾರು ಚಿತ್ರಗಳು ಸಾಮಾಜಿಕ ಕಳಕಳಿ ಹಾಗು ಸಂದೇಶ ಸಾರುತ್ತಿದ್ದವು. ಕನ್ನಡದ ಸಮರ್ಥ ಕಲಾವಿದರು/ತಂತ್ರಜ್ಞರು ಆದ ನರಸಿಂಹರಾಜು, ಜೀ.ವೀ ಅಯ್ಯರ್, ಅಶ್ವಥ್, ಕಲ್ಯಾಣ್ ಕುಮಾರ್, ಉದಯ್ ಕುಮಾರ್, ಬಾಲಕ್ರಿಷ್ಣ, ದ್ವಾರಕೀಶ್, ಪಂಡರಿಬಾಯಿ, ಲೀಲಾವತಿ, ಮಂಜುಳ, ಕಲ್ಪನಾ, ಚಿ. ಉದಯಶಂಕರ್, ರಾಜಾಶಂಕರ್, ಸಂಪತ್, ಮುಂತಾದವರ ಸಮಕಾಲೀನರಾಗಿ ರಾಜ್ ಅವರು ಹಲವಾರು ಚಿತ್ರರತ್ನಗಳನ್ನು ತಂದರು. ನಂತರದ ಪೀಳಿಗೆಯವರಾದ ನಾಗ್ ಸಹೋದರರು, ಶ್ರೀನಾಥ್, ವಿಷ್ಣುವರ್ಧನ್, ಲೊಕೇಶ್, ಹಾಗು ಹಲವರು ರಾಜ್ ಜೊತೆ ಚಿತ್ರರಂಗಕ್ಕೆ ಅದೇ ರೀತಿ ಸೇವೆ ಸಲ್ಲಿಸಿದರು. ಚಿತ್ರರಂಗದ ಇಂದಿನ ಯುವ ಸಾರಥಿಗಳು ಇಂತಹ ಒಂದು ಅಮೋಘ ಪರಂಪರೆ ಮುಂದುವರೆಸಿಕೊಂಡು ಹೋಗಲೆಂದು ಹಾರೈಸೋಣ. ರಾಜ್ ಅವರ ಹಲವು ಪಾತ್ರಗಳ ಅಮೋಘ ಹಾಡುಗಳು ಪೀ.ಬೀ. ಶ್ರೀನಿವಾಸ್ ಅವರ ಕಂಠಸಿರಿಯಲ್ಲಿ ಮೂಡಿಬಂದಿವೆ. ಬಂಗಾರದ ಮನುಷ್ಯ, ಕಸ್ತೂರಿ ನಿವಾಸ, ಎರಡು ಕನಸು, ಸಾಕ್ಷಾತ್ಕಾರ, ಭಕ್ತ ಕುಂಬಾರ, ಗಂಧದಗುಡಿ -- ಈ ಗೀತೆಗಳ ಪಟ್ಟಿ ಬಹಳ ದೊಡ್ಡದು. ನಂತರದ ವರ್ಷಗಳಲ್ಲಿ ರಾಜ್ ಸ್ವಂತವಾಗಿ ಹಾಡಲು ಆರಂಭಿಸಿ – ನಾ ನಿನ್ನ ಮರೆಯಲಾರೆ, ಗಿರಿಕನ್ಯೆ, ಹೊಸ ಬೆಳಕು, ಕವಿರತ್ನ ಕಾಳಿದಾಸ ಅಂತಹ ಚಿತ್ರಗಳಲ್ಲಿ ಅವಿಸ್ಮರಣೀಯ ಗೀತೆಗಳನ್ನು ಹಾಡಿದರು. "ಆಡು ಮುಟ್ಟದ ಸೊಪ್ಪಿಲ್ಲ, ರಾಜ್ ನಟಿಸದ ಪಾತ್ರವಿಲ್ಲ" ಎಂದು ಹೇಳುತ್ತಾರೆ. ರಂಗಭೂಮಿಯ ಮೂಲದಿಂದ ಬಂದ ರಾಜ್ ಅವರು ಚಿತ್ರಗಳಲ್ಲಿ ಪಾತ್ರ ಯಾವುದೇ ಆದರು ಅದಕ್ಕೆ ಜೀವ ತುಂಬಿದ್ದಾರೆ. ದಾಸವರೇಣ್ಯರು, ಐತಿಹಾಸಿಕ, ಪೌರಾಣಿಕ/ಭಕ್ತಿ ಪ್ರಧಾನ ಪಾತ್ರ, ಸಾಮಾಜಿಕ ಪಾತ್ರ, ಯಾವುದೇ ಆಗಲಿ – ರಾಜ್ ಅವರು ಅಭಿನಯ ಪ್ರೌಢಿಮೆ ತೋರಿದ್ದಾರೆ. ಅಸಂಖ್ಯಾತ ಬಿರುದು/ಸನ್ಮಾನ/ಪ್ರಶಸ್ತಿಗಳು ರಾಜ್ ಅವರನ್ನು ಹುಡುಕಿ ಕೊಂಡುಬಂದವು. ಹೀಗಿದ್ದರೂ, ಅವರು ನಿಜ ಜೀವನದಲ್ಲಿ ಸರಳ ಸ್ವಭಾವ ಹಾಗು ನಡವಳಿಕೆ ರೂಢಿಸಿಕೊಂಡವರು. ಜನ ಸಾಮಾನ್ಯರಂತೆ ಒಂದು ಬಿಳಿ ಅಂಗಿ ಹಾಗು ಪಂಚೆಯಲ್ಲಿ ಅವರು ಎಂಥಾ ಸಮಾರಂಭಕ್ಕೂ ಹಾಜರಾಗುತಿದ್ದರು.

ರಾಜ್ ಅವರ ಅಭಿಮಾನಿಗಳು ಅಸಂಖ್ಯಾತ. ರಾಜ್ ಚಿತ್ರ ಬಿಡುಗಡೆಯಾಗುವ ಸಂದರ್ಭ ಒಂದು ಹಬ್ಬದಂಥಹ ವಾತಾವರಣ ನಿರ್ಮಿಸುತಿತ್ತು.ಅವರ ಚಿತ್ರಗಳು ಮಕ್ಕಳ ಜೊತೆಗೂಡಿ ಮನೆ ಮಂದಿಯೆಲ್ಲ ಯಾವ ಮುಜುಗರವಿಲ್ಲದೇ ವೀಕ್ಷಿಸುವಂಥಾದ್ದು. ಭ್ರಾಥೃತ್ವ, ನಾಡ ಪ್ರೇಮ, ಸಭ್ಯ ನಡತೆ, ಹಿರಿಯರ ಬಗ್ಗೆ ಗೌರವ, ಭಾಷೆ ಬಗ್ಗೆ ಪ್ರೀತಿ, ಜೀವನದ ಮೌಲ್ಯ – ಇವೆಲ್ಲ ರಾಜ್ ಚಿತ್ರಗಳಲ್ಲಿ ಕಾಣಬಹುದು. ನಾಂದಿ, ಬಿಡುಗಡೆ, ಜೀವನ ಚೈತ್ರ, ಮಣ್ಣಿನ ಮಗ, ಆಕಸ್ಮಿಕ ಅಂಥ ಚಿತ್ರಗಳಲ್ಲಿ ಸಮಾಜದ ಪಿಡುಗುಗಳ ಬಗ್ಗೆ ಚಿತ್ರಣವಿತ್ತು. ಚಿತ್ರರಂಗದ ಹೊರಗೆ ರಾಜ್ ಅವರು ಭಕ್ತಿ ಗೀತೆಗಳನ್ನು ಹಾಡುವುದು, ನೇತ್ರದಾನದ ಬಗ್ಗೆ ಪ್ರಚಾರ, ಸಹಾಯಾರ್ಥ ಗಾಯನ ಪ್ರದರ್ಶನ, ಹಾಗೂ ಕನ್ನಡ ಪರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಚಿತ್ರರಂಗ, ಕಲೆ, ಹಾಗು ನಾಡಿಗೆ ಇಂಥ ಧೀಮಂತ ಪ್ರತಿಭೆಗಳು ಬಹಳ ಅವಶ್ಯಕ. ಇಂಥ ಒಂದು ಅಪರೂಪದ ವ್ಯಕ್ತಿಯನ್ನ ಕಳೆದುಕೊಂಡದ್ದು ಕನ್ನಡಿಗರಿಗೆ ತುಂಬಲಾರದ ನಷ್ಟ. ಅಮೋಘ ಪ್ರತಿಭೆಯ, ನಮ್ಮ ಪ್ರೀತಿಯ ರಾಜಣ್ಣ ಅವರ ಆತ್ಮಕ್ಕೆ ಶಾಂತಿ ಕೋರುತ್ತ ಈ ಗೀತ ನಮನ: ಈ ಜೀವನ ಬೇವು ಬೆಲ್ಲ, ಬಲ್ಲಾತಗೆ ನೋವೇ ಇಲ್ಲ ... * ನಾವಾಡುವ ನುಡಿಯೇ ಕನ್ನಡ ನುಡಿ, ನಾವಿರುವ ತಾಣವೇ ಗಂಧದಗುಡಿ ... * ಈ ಲೋಕವೆಲ್ಲ ನೀನೇ ಇರುವ ಪೂಜಾ ಮಂದಿರ ... * ಏನೆಂದು ನಾ ಹೇಳಲಿ, ಮಾನವನಾಸೆಗೆ ಕೊನೆಯೆಲ್ಲಿ ... * ನಾದಮಯ ಈ ಲೋಕವೆಲ್ಲ ... * ಜೇನಿನ ಹೊಳೆಯೋ ಹಾಲಿನ ಮಳೆಯೋ, ಸುಧೆಯೋ ಕನ್ನಡ ಸವಿ ನುಡಿಯೋ ... * ಒಲವೇ ಜೀವನ ಸಾಕ್ಷಾತ್ಕಾರ, ಒಲವೇ ಮರೆಯದ ಮಮಕಾರ ... * ಹೊಸ ಬೆಳಕು ಮೂಡುತಿದೆ ... "ನಗುನಗುತಾ ನಲಿ ನಲಿ, ಎಲ್ಲಾ ದೇವನ ಕಲೆಯೆಂದೇ ನೀ ತಿಳಿ, ಅದರಿಂದ ನೀ ಕಲಿ" – ಮಧುಸೂಧನ್ ಅಕ್ಕಿಹೆಬ್ಬಾಳ್

## ಸುಖಪುರುಷನ ನಾಲ್ಕು ಸೂತ್ರಗಳು

ಅಮೆರಿಕಾದಲ್ಲಿ ಕೆಲಸ ಮಾಡುವ ಒಂದಷ್ಟು ವಿದೇಶೀ ಮನಸ್ಸುಗಳು ಬೆರೆಯುವ ಪರಿ ಹೇಗಿದ್ದೀತು? ಎರಡು ಹೆಸರಿಟ್ಟುಕೊಂಡ ಒಬ್ಬ ಚೀನೀಯ, ಅಮೆರಿಕನ್ ಲಾಭದ ಲೆಕ್ಕಾಚಾರ ಹಾಕುವ ವಿದ್ಯಾರ್ಥಿ– ಇವರ ನಡುವೆ ಭಾರತನಾರಿಯ ಹುಡುಕಾಟದಲ್ಲಿರುವ ಭಾರತೀಯ ಹಾಗೂ ಈತನ ಸುಖಸೂತ್ರ !

ನಾನು ಆಫೀಸಿನಿಂದ ಮನೆಗೆ ಬರುವುದನ್ನೇ ಕಾಯುತ್ತಾ ಇರುತ್ತಾನೆ ನನ್ನ ಚೈನೀಸ್ ರೂಮ್‌ಮೇಟ್. ಅವನ ಹೆಸರು 'ಮೀಂಗ್ ಚಾ'. 'ಪೀಟರ್' ಅನ್ನೋದೂ ಅವನ ಹೆಸರೇ. ಅವನ್ಯಾಕೆ ಎರಡು ಹೆಸರು ಇಟ್ಟುಕೊಂಡ್ಡಿದ್ದಾನೆ ಎಂದು ನೀವು ಕೇಳಬಹುದು. ಚೈನಾದಿಂದ ಅಮೆರಿಕಾಗೆ ಬರುವ ಬಹಳಷ್ಟು ಮಂದಿ ಹೆಸರನ್ನು ಬದಲಾಯಿಸುವುದು ರೂಢಿ. ಕಾರಣ– ಅಮೆರಿಕಾದವರಿಗೆ ಇವರ ಹೆಸರನ್ನು ಉಚ್ಛಾರ ಮಾಡುವುದು ಸ್ವಲ್ಪ ಕಷ್ಟ ಎಂಬುದು ಇವರ ವಾದ.

ಅವರಷ್ಟೇ ಏಕೆ ? ನಮ್ಮ ದೇಶಿಯರೇನೂ ಕಮ್ಮಿ ಇಲ್ಲ, ನಮ್ಮ 'ಜೈಕಿಶನ್' ಇಲ್ಲಿಗೆ ಬಂದು 'ಜಾಕ್ಸನ್' ಆಗುತ್ತಾನೆ, 'ಹರೀಶ' 'ಹ್ಯಾರಿ' ಆಗುತ್ತಾನೆ, ಅಷ್ಟೇ ಏಕೆ ಬಸಪ್ಪ ಇಲ್ಲಿ "bus" ಆಗುವುದೂ ಉಂಟು! ಕೆಲವು ಸನ್ನಿವೇಶಗಳಲ್ಲಿ ಇದು ವಿಪರೀತಕ್ಕೆ ಹೋಗುತ್ತದೆ. ಉದಾಹರಣೆಗೆ ನನ್ನ ಒಬ್ಬ ಸಹಪಾಟಿಯ ಹೆಸರು 'ವಿಶ್ವನಾಥ್'. ಆದರೆ ಇಲ್ಲಿಗೆ ಬಂದ ಮೇಲೆ ಅವನು ಹೆಸರನ್ನು 'ವಿಷ್' ಅಂತ ಬದಲಿಸಿಕೊಂಡಿದ್ದಾನೆ. ಇದನ್ನು ಹಿಂದಿಗೆ ಅನುವಾದಿಸಿದಾಗ ಇದರ ಅರ್ಥ 'ವಿಷ' ಎಂದಾಗುವುದು ತುಂಬಾ ವಿಷಾದದ ಸಂಗತಿ. ಈ ಹೆಸರುಗಳ ಗೊಂದಲ ಬಿಟ್ಟು ನಮ್ಮ ಮೂಲ ವಿಷಯಕ್ಕೆ ಬರೋಣ.

'ಮೀಂಗ್ ಚಾ' ನನ್ನನ್ನು ಇಷ್ಟು ಕಾತರದಿಂದ ಏಕೆ ಕಾಯುತ್ತಾ ಇರುತ್ತಾನೆ ? ಎಂದು ನೀವು ನಿಮ್ಮ ಊಹಾಪೋಹದ ಹಕ್ಕಿಯ ಗರಿ ಬಿಚ್ಚುವ ಮುಂಚೆ ನಾನೇ ಹೇಳಿ ಬಿಡುತ್ತೇನೆ. ಇವನಿಗೆ ಭಾರತದ ಇತಿಹಾಸ–ಜಾತಿ–ರಾಜಕೀಯ–ಸಿನಿಮಾ ಹೀಗೆ ಎಲ್ಲದ್ದರ ಬಗ್ಗೆ ವಿವರವಾಗಿ ತಿಳಿದುಕೊಳ್ಳುವ ಮಹದಾಸೆ. ಒಂದು ಕೆಮಿಕಲ್ ಕಂಪನಿಯಲ್ಲಿ ಈತ ಒಬ್ಬ ಕೆಮಿಸ್ಟ್.
ನಮ್ಮ ಸಾಫ್ಟ್ ವೇರ್ ಕಂಪನಿ ಕೆಲಸದ ಥರ ಅಷ್ಟೊಂದು ಒತ್ತಡ ಅವನಿಗೆ ಇರುವುದಿಲ್ಲ. ಆದ್ದರಿಂದ ಸಂಜೆ ೬ ಗಂಟೆಗೆ ಸರಿಯಾಗಿ ಮನೆಗೆ ಹಾಜರ್. ನಮ್ಮ ಕಲ್ಚರಲ್ ಎಕ್ಸ್‌ಚೇಂಜ್ ಚರ್ಚೆಗಳು ಬಹುತೇಕ ಸುಗಮ ಹಾಗೂ ಶಾಂತಿಯುತವಾಗಿ ಇರುತ್ತವೆ. ಆದರೆ ಕೆಲವೊಮ್ಮೆ ಟಿಬೆಟ್, ದಲಾಯಿ ಲಾಮ, ಪಾಕ್–ಚೈನಾ ನಿಗೂಢ ವಹಿವಾಟು ಮುಂತಾದ ವಿಷಯಗಳು ಬಂದಾಗ ಚರ್ಚೆ ವಿಕಾರ ಸ್ವರೂಪಕ್ಕೆ ಹೋಗುವುದುಂಟು. ಹೀಗೆ ನಮ್ಮ ಚರ್ಚೆಯಲ್ಲಿ ಕಿರಿಕ್ಕು ಬಂದಾಗ ಮಾತ್ರ ನನ್ನ ಇನ್ನೊಬ್ಬ ಅಮೆರಿಕನ್ ರೂಮ್ಮೇಟ್ 'ಮಾರ್ವಿನ್'ನ ಅಗತ್ಯ ಬೀಳುತ್ತದೆ. ಮಾರ್ವಿನ್ ವಯಸ್ಸು ೨೨, ಲಾ ಓದುತ್ತಿರುವ ವಿದ್ಯಾರ್ಥಿ. ಇವನು ಕಿರಿಕ್ಕು ಬಗೆಹರಿಸುವುದಕ್ಕೂ ಮುಂಚೆ, ಅದರಿಂದ ಅಮೆರಿಕಾಕ್ಕೆ ಆಗುವ ಲಾಭ–ನಷ್ಟದ ಬಗ್ಗೆ ನೂರು ಬಾರಿ ಯೋಚಿಸುತ್ತಾನೆ. ಅದು ಅವನ ರಕ್ತದೋಷವೆಂಬುದು ನಮ್ಮ (ಹಿಂದಿ–ಚೀನೀ ಭಾಯಿ ಭಾಯಿ) ಅಂತಿಮ ತೀರ್ಮಾನ.

ನಾನು chop sticks ಉಪಯೋಗಿಸುವುದನ್ನು ಮೊದಲು ಕಲಿತದ್ದು ಮಿಂಗ್ ಚಾ ಸಹಾಯದಿಂದ. ಮೊದಲು ಕಷ್ಟವೆನಿಸಿದರೂ ಈಗ ಅನ್ನದ ಒಂದೊಂದು ಅಗಳನ್ನು ಕೂಡಾ ಪ್ಲೇಟ್‌ನಲ್ಲಿ ಬಿಡದಂತೆ ಭಕ್ಷಿಸಬಲ್ಲೆ. chop sticks ಉಪಯೋಗಿಸಿ ಮಾಡುವ ಊಟ ಕೊಡುವ ತೃಪ್ತಿ ಅಪರೂಪದ್ದು. ಹಾಗೆಯೇ ಮೀಂಗ್ ಚಾ ಗೆ ಜೇಸುದಾಸ್ ಅಂದ್ರೆ ತುಂಬಾ ಇಷ್ಟ ಅನ್ನುವುದೂ ಅಪರೂಪದ ಸಂಗತಿ. ಅವನು ಜೇಸುದಾಸ್‌ನ 'ಗೋರಿ ತೇರಾ ಗಾಂವ್ ಬಡಾ ಪ್ಯಾರಾ...' ಹಾಡನ್ನು ಚೈನಿಸ್ ಲಿಪಿಯಲ್ಲಿ ಬರೆದುಕೊಂಡು ಗುನುಗುತಿರುತ್ತಾನೆ. ಮಾರ್ವಿನ್‌ಗೆ ಇಡ್ಲಿ ಎಂದರೆ ಪಂಚಪ್ರಾಣ. ಈಗ ಅವನು ಸ್ವತಂತ್ರವಾಗಿ ಇಡ್ಲಿಯನ್ನು ತಯಾರಿಸಬಲ್ಲ. ಇಂಡಿಯನ್ ಸ್ಟೋರ್‌ನಿಂದ ಇಡ್ಲಿ ಸ್ಟ್ಯಾಂಡ್ ಕೂಡಾ ಕೊಂಡು ತಂದಿದ್ದಾನೆ ! ಆದರೆ ಅವನು ಚಟ್ನಿ ಅಥವಾ ಸಾಂಬಾರ್ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ ಆತ ಇಡ್ಲಿಯನ್ನು ತಿನ್ನುವ ರೀತಿಯೇ ವಿಚಿತ್ರ. ಎರಡು ಇಡ್ಲಿಗಳ ನಡುವೆ ಚಿಕನ್ ಇಟ್ಟುಕೊಂಡು ಸ್ಯಾಂಡ್‌ವಿಚ್ ರೀತಿಯಲ್ಲಿ ಅವನು ತಿನ್ನುತ್ತಾನೆ.

ನನ್ನ ಈ ಸಲದ ಭಾರತ ಭೇಟಿ ಕುರಿತು ನನ್ನ ರೂಮ್ಮೇಟ್‌ಗಳಿಗೆ ಎಲ್ಲಿಲ್ಲದ ಕುತೂಹಲ. ಏಕೆಂದರೆ ಈ ಸಲ ಹುಡುಗಿ ನೋಡಿ, ಸಾಧ್ಯವಾದರೆ ಮದುವೆ ಮಾಡಿಕೊಂಡು ಬರುವೆ ಎಂದು ತಿಳಿಸಿದ್ದೇನೆ. ಇಬ್ಬರಿಗೂ ಇದು ಅರ್ಥವಾಗದ ವಿಚಾರ. ಅವರ ಪ್ರಕಾರ ಒಂದೇ ತಿಂಗಳಲ್ಲಿ ಹುಡುಗಿಯನ್ನು ಒಂದು ಸಾರಿ ನೋಡಿ– ಭೇಟಿಮಾಡಿ ಮದುವೆಯಾಗುವುದು ಮೂರ್ಖತನ. ಆದರೆ ಭಾರತೀಯ ವಿವಾಹಗಳಲ್ಲಿ ಕಂಡು ಬರುವ ಹೆಚ್ಚಿನ ಸ್ಥಿರತೆ ಗಮನಿಸಿದಾಗ ಇವರಿಗೆ ಪರಮಾಶ್ಚರ್ಯ. ನಾನು ಇವರಿಗೆ ಆಗಾಗ ಹೇಳುತ್ತಿರುತ್ತೇನೆ (ಎಲ್ಲೋ ಓದಿದ್ದ ನೆನಪು), 'ಒಬ್ಬ ಗಂಡಸು ಸುಖವಾಗಿರಲು ನಾಲ್ಕು ಅಂಶ ಮುಖ್ಯ. ಒಂದು– ಇರಲು ಬೆಚ್ಚನೆಯ ಗೂಡು, ಅರ್ಥಾತ್ ಮನೆ. ಎರಡು– ವೆಚ್ಚಕ್ಕೆ ಹೊನ್ನು, ಅರ್ಥಾತ್ ಕೈ ತುಂಬಾ ಸಂಬಳ. ಮೂರು– ಬಾಯಲ್ಲಿ ನೀರೂರಿಸುವ ರುಚಿಕಟ್ಟಾದ ಊಟ. ಕೊನೆಯದಾಗಿ– ಮನೆ–ಮನ ತುಂಬುವಂಥಾ 'ಮಡದಿ'. ಮನೆಗಳ ವಿಷಯಕ್ಕೆ ಬಂದಾಗ ಅತ್ಯುತ್ತಮವಾದ ಮನೆಗಳು ಎಂದರೆ ಬ್ರಿಟಿಷರ ಮನೆಗಳು. ಸಂಬಳದ ವಿಷಯಕ್ಕೆ ಬಂದಾಗ ಹೆಚ್ಚಿನವರು ಬಯಸುವುದು ಅಮೆರಿಕಾದ ಡಾಲರ್ ಸಂಬಳ. ಇನ್ನು ಊಟದ ವಿಚಾರಕ್ಕೆ ಬಂದರೆ, ವಿಶ್ವದ ಎಲ್ಲ ಭಾಗಗಳಲ್ಲಿ ಪ್ರಸಿದ್ಧ ಬೋಜನವೆಂದರೆ ಚೈನೀಸ್ ಫುಡ್. ಕೊನೆಯ ಹಾಗು ಮುಖ್ಯವಾದದ್ದು ಹೆಂಡತಿ. ನಿಮ್ಮೊಂದಿಗೆ ಇದ್ದರೆ ಭಾರತೀಯ ನಾರಿ ಅದೇ ಸ್ವರ್ಗಕ್ಕೆ ದಾರಿ. ಎಲ್ಲರಿಗೂ ಇವೆಲ್ಲಾ ಒಟ್ಟೊಟ್ಟಿಗೆ ಸಿಗುವುದು ಕಷ್ಟ. ಆದರೆ ಶ್ರಮಪಟ್ಟರೆ ಕೈತುಂಬಾ ಸಂಬಳ ಪಡೆಯಬಹುದು. ಇದಾದ ನಂತರ ಚೆಂದದ ಮನೆ ಕಟ್ಟುವುದೂ ಕಷ್ಟವೇನಲ್ಲ ಬಿಡಿ. ನಳಕುಲದ ನಮ್ಮಂಥವರಿಗೆ ಚೈನೀಸ್ ಫುಡ್ ತಯಾರಿಸುವುದೂ ತ್ರಾಸಿನ ಮಾತೇನಲ್ಲ. ಆದರೆ ಭಾರತೀಯ ಹೆಂಡತಿ ಸಿಗಬೇಕೆಂದರೆ ಅದೃಷ್ಟ ಒದ್ದುಕೊಂಡು ಬರಬೇಕು !

ಇಷ್ಟೆಲ್ಲವನ್ನೂ ಕಷ್ಟ ಪಟ್ಟು ವಿವರಿಸಿದಾಗ ಮಾತ್ರ ಅಮೇರಿಕನ್ ಲಾಯರ್ ಹಾಗೂ ಚಿಂಗು (ದೇಶೀಯರು ಚೈನೀಸ್‌ಗಳಿಗೆ ಇಟ್ಟಿರುವ ಕೋಡ್‌ವರ್ಡ್) ಗಳನ್ನು ಸುಮ್ಮನೆ ಕೂರಿಸಲು ಸಾಧ್ಯ.

ನನ್ನ ಈ ವಾದ ಸರಿಯೇ ? ನಿಜವಾಗಿಯೂ ಭಾರತೀಯ ಹೆಂಡತಿ ಪಡೆದವನು ಅದೃಷ್ಟವಂತನೇ? ಯಾವುದಕ್ಕೂ ನಿಮ್ಮ ಅನಿಸಿಕೆಯನ್ನು ಗುಟ್ಟಾಗಿ ನನಗೆ ತಿಳಿಸಿ. ನೆನಪಿರಲಿ, ಈ ಪ್ರಶ್ನೆಗಳು ಗಂಡಸರಿಗೆ ಮಾತ್ರ!

Worst Combination: Chinese Home, British food, Indian salary, American wife ! - ಮಲ್ಲಿ ಸಣ್ಣಪ್ಪನವರ್

---

## 'ಇ – ಎಂಗೇಜ್‌ಮೆಂಟ್!'

ಮದುವೆಯ 'ಇ' ಬಂಧ : ಹೌದು, ಇದು ಅಂತರ್ಜಾಲದ ಅನುಬಂಧ ; ವಿವಾಹಪೂರ್ವದ ನಿಶ್ಚಿತಾರ್ಥ ಸಂಬಂಧ. ಬಹುಶಃ ಇದು, ಇಂಟರ್ನೆಟ್ ಮಾಯಾಜಾಲದ ಮೂಲಕ ನಡೆದ ಮೊದಲ ನಿಶ್ಚಿತಾರ್ಥವೂ ಇರಬಹುದು. ವಧು ಮತ್ತು ವರ ನ್ಯೂಯಾರ್ಕ್‌ನ ಮನೆಯಲ್ಲಿ , ಪೋಷಕರು– ಬಂಧುಮಿತ್ರರು ಬೆಂಗಳೂರಲ್ಲಿ . ಇಂಥದೊಂದು ಅಪರೂಪದ ಇ–ನಿಶ್ಚಿತಾರ್ಥಕ್ಕೆ ಒಳಗಾದ ಮದುಮಗ, ತನ್ನ ಅನುಭವವನ್ನು ಅಕ್ಷರ ರೂಪಕ್ಕಿಳಿಸಿದಾಗ...... ಆ ರೋಚಕ ಕ್ಷಣಗಳ ಕಥನ, ದಟ್ಸ್‌ಕನ್ನಡ ಓದುಗರಿಗೆ ಮಾತ್ರ.

ಮುಂಜಾನೆ ಪೇಪರ್ ಹಾಕುವ ಹುಡುಗನ ಹಾದಿಯನ್ನೇ ಕಾಯುತ್ತಿದ್ದ ದಿನಗಳವು. ಮುಖಪುಟಕ್ಕಾಗಿ, ಸ್ಪೋರ್ಟ್ಸ್ ಪೇಜ್‌ಗಾಗಿ, ಸಿನಿಮಾ ಪುಟಕ್ಕಾಗಿ ಮನೆಯವರೆಲ್ಲಾ ಜಗ್ಗಾಟ–ಕೂಗಾಟ ಮಾಡುತ್ತಿದ್ದ ದಿನಗಳು. ಆ ದಿನಗಳನ್ನು ನಾನು ತುಂಬಾ ಮಿಸ್ ಮಾಡಿಕೊಳ್ಳುತ್ತೇನೆ. ಇಂಟರ್‌ನೆಟ್ ಇಲ್ಲದ್ದಿದ್ದರೆ ದೇಶಬಿಟ್ಟು ಬಂದಂಥ ನನ್ನಂಥವರ ಸ್ಥಿತಿ ತುಂಬಾ ಕಷ್ಟವಾಗುತ್ತಿತ್ತೇನೋ!

ಬೆಳಗ್ಗೆ ಎದ್ದ ಕೂಡಲೇ ಓಡುವ ಕೆಲವರನ್ನು ನೋಡಿದ್ದೇನೆ. ಬಾತ್‌ರೂಮ್ ಕಡೆಗಲ್ಲಾ ಅವರು ಓಡುವುದು– ಇ–ಮೇಲ್ ಚೆಕ್ ಮಾಡಲು ಕಂಪ್ಯೂಟರ್ ಕಡೆಗೆ. ತುಂಬಾ ಜನ ಹೀಗೆ ಈ ಅಂತರ್ಜಾಲವನ್ನು ಅತಿಯಾಗಿ ಹಚ್ಚಿಕೊಂಡಿದ್ದಾರೆ. ಇದನ್ನು 'ಇಂಟರ್‌ನೆಟ್ ಅಡಿಕ್ಷನ್' ಎಂದು ಕರೆಯಬಹುದು. ನನ್ನ ಮಿತ್ರನೊಬ್ಬ ತನ್ನ ಒಂದು ತಿಂಗಳ ಮಗು ರಾತ್ರಿ ಎದ್ದು ಅಳುತ್ತಿದ್ದರೆ ಮಗುವನ್ನು ಮಲಗಿಸುವ ಉಪಾಯಗಳಿಗೆ ಇಂಟರ್ನೆಟ್‌ನ ಬಾಗಿಲು ಬಡಿಯುತ್ತಾನೆ. ಅದೇ ನಮ್ಮ ಹಳ್ಳಿಯಾಗಿದ್ದರೆ ಸೂಲಗಿತ್ತಿಯಾದ ಸೋಮಜ್ಜಿಯ ಅಥವಾ ಘಾಟಿ ವೈದ್ಯೆ ಗಂಗಜ್ಜಿಯ ಮನೆಯ ಬಾಗಿಲು ಬಡಿಯುತ್ತಿದ್ದರು. ಮುಂದೆ ಬರುವ ದಿನಗಳಲ್ಲಿ ಈ ಸೋಮಜ್ಜಿ–ಗಂಗಜ್ಜಿಯರ ನುರಿತ ಸಲಹೆಗಳನ್ನು ಕೇಳುವವರೇ ಇಲ್ಲವಾಗಬಹುದೇನೋ. ಹತ್ತುವರ್ಷಗಳ ಹಿಂದೆ ಹುಡುಗಿಯರಿಗೆ ಲವ್‌ಲೆಟರ್ ಕೊಡಲು ತಿಣುಕಾಡುತ್ತಿದ್ದ ದಿನಗಳ ಈಗೆಲ್ಲಿ ಬರಬೇಕು? ಅಂದಿನ ಶಾಲಾದಿನಗಳಂತೆ ಲೀಜರ್ ಬಿಡುವುದನ್ನೇ ಕಾಯ್ದು ಹುಡುಗಿಯರ ಪರ್ಸ್‌ನಲ್ಲಿ, ಕಂಪಾಸ್ಸು ಬಾಕ್ಸ್‌ಗಳಲ್ಲಿ ಲವ್‌ಲೆಟರ್ ಇಡಲು ಕಾಯುವ ಹುಡುಗರು ಈಗ ವಿರಳ. ಇಂದು ಇ–ಮೇಲ್, ಇ–ಗ್ರೀಟಿಂಗ್ಸ್, ಇ–ಗಿಫ್ಟ್, ಇ–ಟಿಕೆಟ್ , ಇ–ಫ್ರೆಂಡ್ಸ್, ಇ–ಡೇಟಿಂಗ್, ಇ–ರೋಮ್ಯಾನ್ಸ್... ಎಲ್ಲಾ ಕಾರ್ಯಗಳು ಇ–ಮಯವಾಗಿವೆ. ಅಂದಹಾಗೆ, ನಾನೀಗ ಹೇಳ ಹೊರಟಿರುವುದು ಇದೇ 'ಇ' ಕಾರದ, ಇ–ಕಾರ್ಯದ ಬಗೆಗೆ.

ಲೋಕವೆಲ್ಲಾ ಇ–ಮಯವಾಗಿರುವಾಗ, ಇದೇ ಲೋಕದಲ್ಲಿರುವ ನಾನು ಕೂಡಾ ಇದಕ್ಕೆ ಹೊರತಾಗಿಲ್ಲ . ನಾನು ನನಗೆ ಬೇಕಾದಷ್ಟು ಇ–ಕಾರ್ಯಗಳನ್ನು (ಇ–ಮೇಲ್, ಇ–ಗ್ರೀಟಿಂಗ್ಸ್, ಇ–ಗಿಪ್ಟ್, ಇ–ಟಿಕೆಟ್ ಇತ್ಯಾದಿ..... ನೀವು ಜಾಸ್ತಿ ಊಹಿಸಿಕೊಳ್ಳಬೇಡಿ!!!) ನಿಯಮಿತವಾಗಿ ಮಾಡುತ್ತಾ ಇರುತ್ತೇನೆ . ಇತ್ತೀಚಿಗೆ ಈ ಪಟ್ಟಿಗೆ ಇನ್ನೊಂದು ಹೊಸ ಇ–ಕಾರ್ಯವೂ ಸೇರಿಕೊಂಡಿದ್ದು ಹೀಗೆ...

ಮಾರ್ಚ್‌ನಲ್ಲಿ ನಮ್ಮ ಮನೆಯವರು ಮತ್ತು ಅವಳ ಮನೆಯವರು ಮಾತುಕತೆ ಮುಗಿಸಿ ಮದುವೆಗೆ 'ಗ್ರೀನ್ ಸಿಗ್ನಲ್' ಕೊಟ್ಟಾಯ್ತು . ಆದರೆ ಪುರೋಹಿತರು ಗಳಿಗೆಯನ್ನು ಕೂಡಿಸಿ ನೋಡಿದಾಗ ಮದುವೆ ದಿವಸ ಅಗಸ್ಟ್ ಕೊನೆಯವರಗೆ ಹೋಯಿತು. ಅದಕ್ಕೆ ಅವರು ಸದ್ಯಕ್ಕೆ ನಿಶ್ಚಿತಾರ್ಥ ('ಎಂಗೇಜ್‌ಮೆಂಟ್') ಮಾಡುವ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ನಾವಿಬ್ಬರು ಅಲ್ಲಿ ಇಲ್ಲದೆ ಅವರಷ್ಟಕ್ಕೆ ಅವರೇ ಸೇರಿಕೊಂಡು (ನಾನು ಮತ್ತು ಅವಳು ಇಬ್ಬರೂ ಇಲ್ಲಿ , ಅಮೆರಿಕಾದಲ್ಲಿ ಕೆಲಸ ಮಾಡುತ್ತಿದ್ದೇವೆ) ಎಂಗೇಜ್‌ಮೇಂಟ್ ಮಾಡುವುದಕ್ಕೆ ಬೇಸರಪಟ್ಟುಕೊಳ್ಳುತ್ತಿದ್ದರು. ಆಫೀಸ್‌ನಲ್ಲಿ ಇಬ್ಬರಿಗೂ ಎಂಗೇಜ್‌ಮೇಂಟ್‌ಗೊಮ್ಮೆ–ಮದುವೆಗೊಮ್ಮೆ ಎರಡು ಸಾರಿ ರಜೆ ಸಿಗುವುದು ಕಷ್ಟಕರವಾಗಿತ್ತು.

ಆಗ ನನಗೆ ತಟ್ಟನೆ ಹೊಳೆದದ್ದು 'ಇ–ಎಂಗೇಜ್‌ಮೆಂಟ್'!

ಬೆಂಗಳೂರಿನಲ್ಲಿರುವ ನನ್ನ ಸಹೋದರಿಗೆ ಮತ್ತು ನನ್ನ ಸ್ನೇಹಿತರಿಗೆ 'ಇ–ಎಂಗೇಜ್‌ಮೆಂಟ್' ಬಗೆಗೆ ಹೇಳಿದಾಗ ಅವರು ತುಂಬಾ ಉತ್ಸಾಹ ತೋರಿಸಿದರು. ಅದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ನಾವು ಅಚ್ಚುಕಟ್ಟಾಗಿ ಮಾಡುತ್ತೇವೆ, ನೀನು ಅದರ ಚಿಂತೆ ಬಿಡು ಎಂದರು. ಎಷ್ಟೇ ಆದರೂ ಸಿಲಿಕಾನ್‌ಸಿಟಿಯಲ್ಲಿ ಇರುವವರು ನೋಡಿ! ಅವರಿಗೆ ಜಾಸ್ತಿ ಹೇಳಬೇಕಾಗಿಲ್ಲ. ಕೊನೆಯವರೆಗೂ ಈ ವಿಚಾರವನ್ನು ಗುಪ್ತವಾಗಿ ಇಡಲು ನಿರ್ಧರಿಸಿದೆವು. ಏಕೆಂದರೆ ಇದು ಎಷ್ಟರಮಟ್ಟಿಗೆ ಯಶಸ್ವಿಯಾಗುವುದೆಂದು ನಮಗೆ ಲೆಕ್ಕಹಾಕುವುದು ಕಷ್ಟವಾಗಿತ್ತು.

ನಿಗದಿಪಡಿಸಿದ ನಿಶ್ಚಿತಾರ್ಥದ ದಿನ– ಮೇ ೨, ೨೦೦೪ರ ಮಧ್ಯಾಹ್ನ ೧೨:೩೦ ಗಂಟೆಗೆ ಅದು ಭಾರತೀಯ ಕಾಲಮಾನದ ಪ್ರಕಾರ, ಆದರೆ ನ್ಯೂಯಾರ್ಕ್ ವೇಳೆಯ ಪ್ರಕಾರ ನಮಗೆ ಮೇ ೨, ೨೦೦೪ರ ಬೆಳಗಿನ ಜಾವ ೩:೦೦ ಗಂಟೆ, ರಾತ್ರಿಯೆಲ್ಲಾ ಜಾಗರಣೆ ಮಾಡುವುದು ನಮಗೆ ಕಷ್ಟದ ಕೆಲಸವಾಗಲಿಲ್ಲ . ಏಕೆಂದರೆ ಸುಮಾರು ೧೦ ಗೆಳೆಯರು ನಮಗಿಂತ ಜಾಸ್ತಿ ಉತ್ಸಾಹದೊಂದಿಗೆ ಈ ಹೊಸ ''ಇ–ಕಾರ್ಯ' ನೋಡುವುದಕ್ಕಾಗಿ ಕಾಯುತ್ತಿದ್ದರು. ಹರಟೆಯಲ್ಲಿ ಮಗ್ನರಾಗಿದ್ದ ನಮಗೆ ಸುಮಾರು ೩:೦೦ ಗಂಟೆಗೆ ಇವಳ ಸಹೋದರ ಭಾರತದಿಂದ ಫೋನ್ ಕರೆ ಮಾಡಿ, 'ಬೇಗ ರೆಡಿಯಾಗಿ ಬನ್ನಿ, ಇಲ್ಲಿ ಎಲ್ಲಾ ನಿಮಗೊಸ್ಕರ ಕಾಯುತ್ತಾ ಇದ್ದಾರೆ' ಎಂದಾಗ ನನಗೆ ಒಂದು ಕ್ಷಣ ಬೆಂಗಳೂರಿನಲ್ಲೇ ಇದ್ದ ಅನುಭವವಾಯಿತು. ಮೊದಲೇ ಹೇಳಿದ ಪ್ರಕಾರ ನನ್ನ ಸಹೋದರಿ ಮತ್ತು ನನ್ನ ಸ್ನೇಹಿತರು ಎಂಗೇಜ್‌ಮೇಂಟ್ ನಡೆಯುತ್ತಿದ್ದ ಹಾಲ್‌ನಲ್ಲಿ ಕಂಪ್ಯೂಟರ್ ತಂದು ಇಂಟರ್‌ನೆಟ್‌ಗೆ ಕನೆಕ್ಟ್ ಮಾಡಿಕೊಂಡು ನಮಗೊಸ್ಕರ ನೆಟ್‌ನಲ್ಲಿ ಕಾಯುತ್ತಿದ್ದರು.

ತಕ್ಷಣ ನಾವು ಕೂಡಾ ನಮ್ಮ ಕಂಪ್ಯೂಟರ್‌ನ್ನು ಇಂಟರ್–ನೆಟ್‌ಗೆ ಕನೆಕ್ಟ್ ಮಾಡಿದೆವು, 'ಯಾಹೂ', 'ಎಂ.ಎಸ್.ಎನ್' ಹರಟೆಕಿಟಕಿಗಳ ಮೂಲಕ ಬೆಂಗಳೂರಿಗೆ ಸಂಪರ್ಕ ಕಲ್ಪಿಸಿಕೊಂಡೆವು. ಅದಾದ ಮೇಲೆ 'ನಿಮ್ಮ ಕ್ಯಾಮರಾ ಆನ್ ಮಾಡಿಕೊಳ್ಳಿ' ಎಂಬ ಬರಹ ಸಂದೇಶ ಅವರಿಂದ ಬಂದಿತು. ನಾವು ಕ್ಯಾಮರಾ ಆನ್ ಮಾಡಿದ ತಕ್ಷಣ ಅಷ್ಟೊತ್ತು ನಮಗಾಗಿ ಹಾಲ್‌ನಲ್ಲಿ ಕಾಯ್ದು ಕುಳಿತಿದ್ದ ನಮ್ಮ ಸುಮಾರು ೨೦೦ ಜನ ಸಂಬಂಧಿಕರು ಹಾಗೂ ಸ್ನೇಹಿತರು ನಮ್ಮ ಮುಖಗಳನ್ನು ಕಂಪ್ಯೂಟರ್‌ನಲ್ಲಿ ನೋಡುತ್ತಿದ್ದ ಹಾಗೆ ಕೂಗು ಮತ್ತು ಚಪ್ಪಾಳೆಗಳ ಮೂಲಕ ನಮ್ಮನ್ನು ಸ್ವಾಗತಿಸಿದರು. ಆ ಕ್ಷಣದ ಚಪ್ಪಾಳೆ–ಗಲಾಟೆ ಇಂದು ಕೂಡಾ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿವೆ. ಬೆಂಗಳೂರಿನಿಂದ ಪುರೋಹಿತರ ಮಂತ್ರಗಳು ಜೋರಾಗಿ ಕೇಳಲಾರಂಭಿಸಿದವು,

ಅದುವರೆಗೂ ಅವಳ ಕಡೆ ಸಂಬಂಧಿಕರನ್ನು ನಾನು, ನನ್ನ ಕಡೆ ಸಂಬಂಧಿಕರನ್ನು ಅವಳು ನೋಡಿರಲಿಲ್ಲ . ಹಾಗಾಗಿ ಶುರುವಾಯಿತು ನೋಡಿ 'ಇ–ಇಂಟ್ರೊಡಕ್ಷನ್' ವಿಭಾಗ. ನಾನೆಂದೆ, 'ಇವಳು ನಮ್ಮತ್ತೆ ತಂಗಿಯ ಭಾವನ ಅಕ್ಕನ ಗಂಡನ ಸೊಸೆ'. ಅವಳೆಂದಳು, 'ಇವನು ನಮ್ಮಜ್ಜನ ತಾಯಿಯ ಗಂಡನ ಅಣ್ಣನ ಮಗನ ಬಾಮೈದ'. ಹೀಗೆ ಸ್ವಲ್ಪ ಹೊತ್ತು ಸಂಬಂಧಿಕರ ಸಂಬಂಧಗಳ ಸಮೀಕರಣಗಳನ್ನು

ಬಿಡಿಸಿ ತಿಳಿದುಕೊಳ್ಳಲು ಪ್ರಯತ್ನಿಸಿ ಸುಸ್ತಾಗಿ ಸುಮ್ಮನಾದೆವು. ಇಲ್ಲಿರುವ ನಮ್ಮ ಸ್ನೇಹಿತರೆಲ್ಲಾ ಅಲ್ಲಿಂದ ಬರುತ್ತಿದ್ದ ಅಚ್ಚುಕಟ್ಟಾದ ನೇರ ಪ್ರಸಾರವನ್ನು ನೋಡಿ ಆಶ್ಚರ್ಯಪಟ್ಟರು, ನಮ್ಮೆಲ್ಲರಿಗೂ ಇದೆಲ್ಲಾ ಒಂದು ರೀತಿಯ ಅಪರೂಪದ ಹೊಸ ಅನುಭವದ ಕ್ಷಣಗಳಾಗಿದ್ದವು ಎಂದರೆ ತಪ್ಪಾಗಲಾರದು.

ನಮ್ಮ ಹೆತ್ತವರು ಫಲತಾಂಬೂಲಗಳನ್ನು ವಿನಿಮಯ ಮಾಡಿಕೊಂಡರು. ನನಗೆ ಉಡುಗೊರೆಯಾಗಿ ಬಂದ ಬಟ್ಟೆಯನ್ನು, ಅವಳಿಗೆ ಬಂದ ಸೀರೆ, ಬಳೆ, ಆಭರಣಗಳನ್ನು ಕ್ಯಾಮರಾದಲ್ಲಿ ಡಬ್ಬಲ್ ಫೋಕಸ್ ಮಾಡಿ ನಮ್ಮ ಸಮಾಧಾನಕ್ಕಾಗಿ ತೋರಿಸುವುದನ್ನು ಅವರು ಮರೆಯಲಿಲ್ಲ. ಒಬ್ಬರಾದ ಮೇಲೆ ಒಬ್ಬರಂತೆ ಸಾಲಾಗಿ ಕ್ಯಾಮರಾದ ಮುಂದೆ ಬಂದು ಫೋಸ್ ಕೊಟ್ಟರು.
ಸಮತೋಲನವಾಗಿ ಇಲ್ಲಿ ನಮ್ಮ 'ಇ–ಇಂಟ್ರೊಡಕ್ಷನ್' ಕಾರ್ಯಕ್ರಮ ಸಾಗಿತ್ತು . ಆಮೇಲೆ ಬಂದ ವರದಿಗಳ ಪ್ರಕಾರ ಕೆಲವೊಂದಿಷ್ಟು ಸಂಬಂಧಕರು ಕಂಪ್ಯೂಟರ್‌ಗೆ ಅಕ್ಷತೆ ಹಾಕಿ, ಕುಂಕುಮ ಹಚ್ಚಿ ಆರತಿ ಬೆಳಗಿ ಸಂತೋಷ ಪಟ್ಟರಂತೆ. ನಾವು ಕೂಡಾ ಇಲ್ಲಿಂದ ನಿಯಮಿತವಾಗಿ ನಮಸ್ಕಾರಗಳನ್ನು ಮಾಡಿದೆವೆನ್ನಿ . 'ನಿನ್ನ ಸೀರೆ ಕಲರ್ ಚೆನ್ನಾಗಿದೆ', 'ಹೇರ್ ಸ್ಟೈಲ್ ಚೆನ್ನಾಗಿದೆ', 'ಬಳೆಗಳು ಚೆನ್ನಾಗಿವೆ'..... ಹೀಗೆ ಹೆಂಗಸರ ಮಾಮೂಲಿ ಮಾತುಕತೆ ಇ–ಮಯವಾಗಿತ್ತು.
ಅಲ್ಲಿಯವರೆಗೂ ವೀಕ್ಷಕರಾಗಿದ್ದ ನಾವು ಪುರೋಹಿತರ ಆದೇಶದಂತೆ ಒಬ್ಬರಿಗೊಬ್ಬರು ಕುಂಕುಮ ಹಚ್ಚಿ, ಸಿಹಿಯನ್ನು ಹಂಚಿಕೊಂಡೆವು. ನಂತರ ಉಂಗುರ ವಿನಿಮಯ ಮಾಡಿಕೊಂಡೆವು. ಎಲ್ಲರಿಗೂ ಕ್ಯಾಮರಾ ಕಿಂಡಿಯಿಂದ ಇ–ಪುರೋಹಿತರ ಆದೇಶದಂತೆ ನಮಸ್ಕಾರ ಮಾಡಿದೆವು. ಕಿರಿಯರಿಗೆ ಕೈ ಬೀಸಿದೆವು. ಪ್ರತಿಹಂತದಲ್ಲೂ ಚಪ್ಪಾಳೆಯಿಂದ ನಮ್ಮನ್ನು ಆ ಕಡೆಯಿಂದ ಎಲ್ಲರೂ ಹುರಿದುಂಬಿಸಿದರು. ಅಂದು ಎಲ್ಲರಿಂದ ದೂರವಿದ್ದಂತೆ ನಮಗೆ ಅನಿಸಲೇ ಇಲ್ಲ . ಅಲ್ಲಿಯವರ ಪ್ರಕಾರ ಒಂದು ವೇಳೆ ನಾವು ಖುದ್ದಾಗಿ ಅಲ್ಲಿಗೆ ಹೋಗಿದ್ದರು ಕೂಡಾ ಇಷ್ಟೊಂದು ಕುತೂಹಲ ಭರಿತ ರೊಮಾಂಚಕಾರಿ ನಿಶ್ಚಿತಾರ್ಥ ಆಗುತ್ತಿರಲ್ಲಿಲ್ಲವಂತೆ.

ಅಂದು ನಮ್ಮೊಂದಿಗೆ ಇದ್ದ ಇಲ್ಲಿನ ಸ್ನೇಹಿತರ ಹಾಗೂ ಅಂದು ನಮ್ಮೆಲ್ಲರಿಗೆ ಹಿರಿಯರಾಗಿ ಮಾರ್ಗದರ್ಶನ ಮಾಡಿದ ಸುಶ್ಮಾ ಆಂಟಿಯ ಸಹಾಯವನ್ನು ನಾವು ಎಂದಿಗೂ ಮರೆಯಲು ಸಾಧ್ಯವಿಲ್ಲ . ನಾನು 'ಇ–ಎಂಗೇಜ್‌ಮೇಂಟ್'ನಲ್ಲಿ ಒಂದು ಚಿಕ್ಕ ಪಾತ್ರಧಾರಿಯಾಗಿದ್ದೆ ಮಾತ್ರ. ಆದರೆ ಅದರ ನಿಜವಾದ ಯಶಸ್ಸಿನ ಪಾಲು ನನ್ನ ಸಹೋದರಿ, ನಮ್ಮ ಕಾರ್ಯಕ್ಕೆ ಸಹಾಯ ಮಾಡಿದ ಸ್ನೇಹಿತರಿಗೆ ಸಲ್ಲುತ್ತದೆ. ಅಂತರ್‌ಜಾಲದಲ್ಲಿ ಪುಕ್ಕಟೆಯಾಗಿ ಸಿಗುವ 'ಯಾಹೊ' ಮತ್ತು 'ಎಂ.ಎಸ್.ಎನ್' ಹರಟೆ ಕಿಡಕಿಗಳ ಪಾತ್ರವನ್ನು ಕೂಡಾ ನಾವು ಮರೆಯುವಂತಿಲ್ಲ.
ನೀವು ಕೂಡಾ ಮನೆಯವರಿಂದ ದೂರ ಇರುವಿರಾ ? ನಿಮ್ಮ ಮಗನ ಹುಟ್ಟುಹಬ್ಬವಿದೆಯಾ ? ನಿಮ್ಮ ಮಡದಿಯ ಸೀಮಂತವಿದೆಯಾ ? ನಿಮ್ಮ ಮನೆಯಲ್ಲಿ ಸಂಭ್ರಮದ ಸಮಯವೇ ? ನಿಮ್ಮ ಮನೆಯವರೆಲ್ಲಾ ನಿಮ್ಮೊಂದಿಗೆ ಈ ಸಂತೋಷದ ಕ್ಷಣಗಳಲ್ಲಿ ಜೊತೆಗಿಲ್ಲ ಎಂಬ ಕೊರಗು ನಿಮಗಿದೆಯಾ ? ಹಾಗಾದರೆ ನಿಮ್ಮ ಮುಂದೆ ಇರುವ ಕೆಲವೇ ದಾರಿಗಳಲ್ಲಿ 'ಇ–ಕಾರ್ಯ' ಕೂಡಾ ಒಂದು. ನಿಮ್ಮ ಮನೆಯ ಇ–ಮಯವಾದ ಸಂದರ್ಭಗಳನ್ನು ಮತ್ತು ನಿಮ್ಮ 'ಇ–ಆಶೀರ್ವಾದ', 'ಇ–ಅಭಿಪ್ರಾಯ'ಗಳನ್ನು 'ಇ–ಮೇಲ್' ಮೂಲಕ ನಮಗೆ ತಿಳಿಸಿ. (sannams@hotmail.com)

**Have you Opened a 529 PLAN for your child yet? If not call**

**Mr. Rajendra R.Rao**
30 years experienced in Wall Street.
**1-508-208-5809**
**Stocks, Bonds, Annuities, Mutual funds and Options.**
Securities Offered through Wall Street*E, Member NASD/SIPC
Accounts Carried by ADP Clearing and Outsourcing services.
Inc.Tax ID: 13-2967453.

## *Editorial Note*

It is that time again when we all begin with new resolutions and welcome the New Hindu Lunar Year and prepare ourselves to gracefully face 'bitter sweet' events that might follow. Yes! It is Ugadi.

***"We, the staff of Darpana, wish all the members of Mandaara, New England Kannada Koota, a very happy Ugadi and a prosperous New Year"***

Every year we welcome Ugadi with 'Hasiru Torana', signifying a new beginning of life when fresh shoots and leaves emerge from the tree branches after the bitter winter cold, and taste "Bevu Bella" (a concoction of Neem flowers/buds and Jaggery) symbolizing that life is a mixture of pleasure and pain that we should all accept with equanimity. Perhaps it is in this 'Vyaya Naama Samvatsara' that Darpana is long overdue and will make yet another new beginning for Mandaara, New England Kannada Koota. With the hope and expectation that our readers and community members will continue to support their voice, Darpana, we have returned to bring new issues of our newsletter. We would like to expand the contents of the newsletter to bring more interesting and exciting community news and events. We look forward to your continued support and encouragement.

The current issue was brought out at a very short notice. Any errors are the responsibility of the Darpana staff. Finally, we are grateful to the authors and advertising sponsors who have sent their articles and advertisements for publication in the newsletter and hope that all the members will help us make it a successful publication of our Kannada Koota.

*Darpana Staff*

*Prakash Purohit, Nagendra Hande, Aruna Purohit, Rajendra Rao, Guruprasad Samaga*




Picnic 2005




Ganesha Chaturthi 2005




Purandara Dasa Day 2006

**Qualified clientsreceiveupto a $750 Credit at Closing.**

- **Find your dream home at the lowest price.**
- **List your home to sell it quickly at highest value.**
    - **Please Contact your Realtor Today!**



## Ananth Ram



**RE/MAX First Choice**
**155 Otis Street**
**Northborough, MA 01532**

**Direct: (508) 864-1422**
**Fax: (508) 351-1555**



***EXIT PREMIER REAL ESTATE***
85 Wilmington Road Burlington, MA 01803

As a Real Estate agent, my goal is to provide loyal service with personal attention to all my clients who entrust me with their Real Estate needs.
Competitive commission, Accountability, Confidentiality, Protect your Interest, Provide you the facts in a timely manner.

PHONE #: 781-258-7791
Referral: Please refer me to your family or friend who is looking to sell or buy a house
I will appreciate your referral and reward.
You can register and get access to MLS listing:
**http://www.manjunathan.homelog.com**

## ಎಲ್ಲರಿಗೂ ಯುಗಾದಿಯ ಹಾರ್ದಿಕ ಶುಭಾಶಯಗಳು




Kolatta in IAGB




Manoranjini




Picnic 2005